MANGALORE MARKET REPORTS
MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - FRIDAY 28-4-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

**ಮಲೇಶಿಯನ್ ಪಾಮೆಣ್ಣೆ ದರ ಸತತ 2ನೇ ತಿಂಗಳು ಇಳಿಕೆ**

ಇಂಡೋನೇಶೀಯಾದ ಪಾಮೆಣ್ಣೆ ರಫ್ತು ಪೂರೈಕೆ ಹೆಚ್ಚಳ ಹಾಗೂ ರಫ್ತು ಬೇಡಿಕೆ ಇಳಿಕೆಯ ಹಿನ್ನಲೆಯಲ್ಲಿ ಮಲೇಶಿಯಾದ ಪಾಮೆಣ್ಣೆ ದರ ಸತತ 2ನೇ ತಿಂಗಳಲ್ಲಿ ಇಳಿಕೆಯತ್ತ ಸಾಗಿದೆ. ಈ ತಿಂಗಳಲ್ಲಿ ಒಟ್ಟು 8 ಶೇಕಡಾ ಕ್ಕೂ ಮೀರಿ ದರ ಇಳಿಕೆಯಾಗಿದೆಯೆನ್ನಲಾಗಿದೆ. ಇಂಡೋನೇಶೀಯಾ ಆಂತರಿಕ ಮಾರುಕಟ್ಟೆಯಲ್ಲಿ ಮಾರಾಟ ಮಾಡಬೇಕಾದ ಪಾಮೆಣ್ಣೆ ಪ್ರಮಾಣವನ್ನು 450000 ಟನ್‌ಗಳಿಂದ 300000 ಟನ್‌ಗಳಿಗೆ ಇಳಿಕೆ ಮಾಡಿರುವುದರಿಂದ ಅಲ್ಲಿನ ಪಾಮೆಣ್ಣೆ ರಫ್ತಿಗೆ ಲಭ್ಯತೆ ಹೆಚ್ಚಳವಾಗಲಿದೆ. ಇತರ ಪರ್ಯಾಯ ಖಾದ್ಯ ತೈಲಗಳ ದರಗಳೂ ಇಳಿಕೆಯಾಗಿ ಕಡಿಮೆಯಿರುವುದರಿಂದ ಪಾಮೆಣ್ಣೆ ದರದ ಮೇಲೆ ಪರಿಣಾಮ ಬೀರಿದೆ.

**ಬೇಡಿಕೆಯ ಕಳವಳದಿಂದ ಕಾಫಿ ದರ ಸ್ವಲ್ಪ ಇಳಿಕೆ**

ಬೇಡಿಕೆಯ ಕಳವಳದಿಂದ, ಆರ್ಥಿಕ ಹಿನ್ನಡೆಯಿಂದ ಜಾಗತಿಕ ಕಾಫಿ ದರ ಸ್ವಲ್ಪ ಮಟ್ಟಿನ ಇಳಿಕೆ ಕಂಡಿದೆಯೆನ್ನಲಾಗಿದೆ.

**ಆವಕ ಹೆಚ್ಚಳದಿಂದ ಅರಸಿನ ದರ ಇಳಿಕೆ**

ಹೊಸ ಬೆಳೆಯ ಆವಕ ಹೆಚ್ಚಳದಿಂದ ಅರಸಿನ ದರ ಇಳಿಕೆಯಾಗಿದೆಯೆನ್ನಲಾಗಿದೆ.